**<u>ದಿನಾಂಕ 27.02.2026 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯವಿಚಾರಣೆಃ ಅರ್ಜಿದಾರರ ಪರ ಶ್ರೀ ಎಂ ಕೆ ಎನ್ ವಕೀಲರಿಂದಃ</u>**

ಅರ್ಜಿಗೆ ಸಂಬಂದಪಟ್ಟಂತೆ ಆಧಾರ್ ಕಾರ್ಡ್ ನ ನೋಟರೈಸ್ ಪ್ರತಿಯನ್ನು ನಿಪಿ-12 ಎಂದು, ಪಾನ್ ಕಾರ್ಡ್ ನೋಟರೈಸ್ ಪ್ರತಿಯನ್ನು ನಿಪಿ-13 ಎಂದು, VISA ದ ನೋಟರೈಸ್ ಪ್ರತಿಯನ್ನು ಅಸಲು ಪ್ರತಿಯೊಂದಿಗೆ ಓಲಿಸಿ ನಿಪಿ-14 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಎದುರುದಾರರಾದ ಆರ್ 2 ಪರ ಶ್ರೀ ಟಿ ವಿ ಆರ್ ವಕೀಲರಿಂದಃ</u>**

ನಾವು ವಾಹನದಲ್ಲಿ 5 ಜನ ಹೋಗುತ್ತಿದ್ದೇವು. ಅಪಘಾತದಲ್ಲಿ ಮೂರು ಜನರಿಗೆ ಗಾಯವಾಗಿರುತ್ತದೆ ಮತ್ತು ಒಬ್ಬರು ತೀರಿಕೊಂಡಿರುತ್ತಾರೆ. ಅಪಘಾತವು ರಾತ್ರಿ 7.50 ರಲ್ಲಿ ಆಗಿರುತ್ತದೆ. ಅಪಘಾತಕ್ಕೆ ಒಳಗಾದ ವಾಹನವು ನನ್ನ ನಾದಿನಿಗೆ ಸೇರಿರುತ್ತದೆ. ಅಪಘಾತ ಆದ ಸಮಯದಲ್ಲಿ ನಾನು ನಿದ್ದೆ ಹೋಗುತ್ತಿದ್ದೆ. ಶಬ್ದ ಕೇಳಿ ಎದ್ದಿರುತ್ತೇನೆ. I-10 ಕಾರಿನನವರು ದೂರು ನೀಡಿರುತ್ತಾರೆ. ನನಗೆ ದೂರಿನ ವಿಷಯಗಳು ಗೊತ್ತಿದೆ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತೆಂದು ನನಗೆ ಗೊತ್ತಿಲ್ಲ. ನಾನು ಶಾಲಾ ದಾಖಲೆಗಳನ್ನು ಹಾಜರು ಪಡಿಸಿಲ್ಲ. ಅಪಘಾತ ಆದ ನಂತರ ಚನ್ನಪಟ್ಟಣ ಸರ್ಕಾರಿ ಆಸ್ಪತ್ರಗೆ ಹೋಗಿರುತ್ತೇನೆ. ನನಗೆ ಮೊಣಕಾಲಿಗೆ ಮಾತ್ರ ಗಾಯ ಆಗಿದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಅನೇಕ ಗಾಯಾಗಾಳು ಆಗಿರುತ್ತವೆ. BGS ಆಸ್ಪತ್ರೆಯಲ್ಲಿ ಎರಡು ದಿನ ದಾಖಲಾಗಿದ್ದು ಕಣ್ಣೂರು ಹಾಸ್ಟಾರ್ ಮಿನ್ಸ್ ಆಸ್ಪತ್ರೆಗೆ ಸೇರಿರುತ್ತೇನೆ. ಸದರಿ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. Discharge summary ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮೇಲಿನ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಾನು ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಾನು ಚಿಕಿತ್ಸೆ ಪಡೆದ ವಿವರಗಳ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

ಮೆಡಿಕಲ್ ಬಿಲ್ಲುಗಳನ್ನು ನಾನು ಸೃಷ್ಟಿ ಮಾಡಿದ್ದೇನೆಂದರೆ ಸುಳ್ಳು. ನಾನು ಔಷದಿ ಚೀಟಿಗಳ್ಳು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಾನು ಔಷದಿಗಳನ್ನು ಖರೀದಿ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ನಿಪಿ-4 ರಲ್ಲಿ 11ನೇ ಬಿಲ್ಲಿಗೆ ಸಂಬಂಧಿಸಿದಂತೆ ಔಷದಿ ಚೀಟಿ ಮಾಡಿಲ್ಲ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಡಿಸೆಂಬರ್ ನಲ್ಲಿ ಮೊದಲನೇ ಶಸ್ತ್ರ ಚಿಕಿತ್ಸೆ ಮತ್ತು ಜನವರಿಯಲ್ಲಿ ಎರಡನೇ ಚಿಕಿತ್ಸೆ ಮಾಡಿಸಿರುತ್ತೇನೆ ಎಂದು ಹೇಳುತ್ತಾರೆ. ಶಸ್ತ್ರ ಚಿಕಿತ್ಸೆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸುಳ್ಳು. ಕಣ್ಣೂರು ಹಾಸ್ಟಾರ್ ಮಿನ್ಸ್ ಆಸ್ಪತ್ರೆಯ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸುಳ್ಳು. ನಿಪಿ-5 ರ ವೇತನ ಪ್ರಮಾಣ ಪತ್ರದ್ಲಲಿ ನನ್ನ ಹೆಸರು ನಮೂದು ಮಾಡಿಲ್ಲ ಎಂದರೆ ಸುಳ್ಳು. ನಿಪಿ-5 ರ ಪ್ರಕಾರ ನಾನು ವಿದ್ಯಾರ್ಥಿ ಎಂದರೆ ಸಾಕ್ಷಿ ಬೆಲಿಜಿಯಂ ದೇಶದಲ್ಲಿ ವಿದ್ಯಾರ್ಥಿ ಎಂದು ನಮೂದಿಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-5 ರಲ್ಲಿ ಸೀಲು ಮತ್ತು ಸಹಿ ಇಲ್ಲ ಎಂದರೆ ಸಾಕ್ಷಿಯು ಸೀಲು ಇಲ್ಲ ಸಹಿ ಇದೆ ಎಂದು ಹೇಳುತ್ತಾರೆ. ನಾನು ಉದ್ಯೋಗದ ಬಗ್ಗೆ ನಾನು ವೇತನ ಪ್ರಮಾಣ ಪತ್ರ ಹಾಜರು ಮಾಡಿಲ್ಲ ಎಂದರೆ ಸುಳ್ಳು. ನಾನು ಯಾವುದೇ ಉದ್ಯೋಗ ಮಾಡುತ್ತಿರಲಿಲ್ಲ ಎಂದರೆ ಸುಳ್ಳು. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದೇನೆಂದರೆ ಸುಳ್ಳು. ನಾನು ಮೊದಲನಂತೆ ಕೆಲಸ ಮಾಡುತ್ತಿದ್ದೇನೆ ಎಂದರೆ ಸುಳ್ಳು. ನಾನು ನ್ಯೂನತೆ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

**ಓ ಹೇ ಕೇ ಸ ಒ**

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ**